## ಆಕ್ರಮಣಕಾರಿಯೇ ಆಲಂಕಾರಿಕ

# ವಿದೇಶಿ ಗಿಡಗಳು?



ವಾಟರ್ ಹಯಾಸಿಂತ್ ಸಸ್ಯ

■ ಸೀಮಾ ಹೆಗಡೆ

ಆಲಂಕಾರಿಕ ಸಸ್ಯಗಳತ್ತ ಒಲವಿರುವ ನನ್ನನ್ನು ಗಿಡಗಳ ಮಳ್ಳಿಯೆಂದೇ ನನ್ನ ಮೊಬೈಲ್ ತಿಳಿದುಕೊಂಡಿದೆ. ಗೂಗಲ್ ನ್ಯೂಸ್‌ನಿಂದ ಹಿಡಿದು ಇನ್‌ಸ್ಟಾಗ್ರಾಂ, ಫೇಸ್‌ಬುಕ್, ಯೂಟ್ಯೂಬ್ ಎಲ್ಲೆಲ್ಲೂ ಗಿಡಗಳೇ. ಹೀಗೆ ಸಾಮಾಜಿಕ ಜಾಲತಾಣದಲ್ಲಿ ಒಂದಷ್ಟು ರೀಲ್‌ಗಳು ನನ್ನ ಗಮನಸೆಳೆದವು.

ಸ್ಕೂಟರ್ ಮೇಲೆ ಸಾಗುತ್ತಿರುವ ಮಹಿಳೆಯೊಬ್ಬಳು ರಸ್ತೆ ಬದಿಯಲ್ಲಿ ಕಳೆಯಾಗಿ ಬೆಳೆಯುತ್ತಿರುವ ಸಿಂಗೋನಿಯಂ ಗಿಡವನ್ನು ಕಂಡು ಕಿತ್ತು ಮನೆಗೆ ತಂದು ಪಾಟಿಂಗ್ ಮಾಡುತ್ತಾಳೆ. ಅಮೂಲ್ಯವಾದದ್ದೇನೋ ಸಿಕ್ಕ ಮಹಾಖುಷಿ ಆಕೆಯದ್ದು. ಇದನ್ನು ಲೈಕ್ ಮಾಡಿದ್ದೇ ಮನೀ ಪ್ಲಾಂಟ್, ಸ್ನೇಕ್ ಪ್ಲಾಂಟ್, ಅಲೊವೆರಾ, ಮೊನೆಸ್ಟೆರಾ ಗಿಡಗಳ 'ಮಿಶನ್ ಪ್ಲಾಂಟ್ ರೆಸ್ಕ್ಯೂ' ಒಂದರ ಹಿಂದೆ ಒಂದರಂತೆ ತೂರಿಬಂದವು. ಅನಾಥವಾದ ಗಿಡವನ್ನು, ಮೇಲಾಗಿ ಹಸುರಿನ ಜೀವವೊಂದನ್ನು ಕಾಪಾಡಿದ ಹಿರಿಮೆ ಅವರದ್ದೆಲ್ಲಾ!

ಬಹುತೇಕ ದಕ್ಷಿಣ ಅಮೆರಿಕ ಮೂಲದವಾದ ಈ ವಿದೇಶಿ ಸಸ್ಯಗಳು ಹೀಗೆ ರಸ್ತೆ ಬದಿಯ ಕಳೆಯಾಗಿ ನಮ್ಮವೇ ಎಂಬಂತೆ ಸಹಜವಾಗಿ ಬೆಳೆಯುತ್ತಿರುವುದು ಆರೋಗ್ಯಕರವೇ? ಇಂತಹ ಸಸ್ಯಗಳನ್ನು ಕಿತ್ತು ತಂದು ನೆಟ್ಟು ಗಿಡವೊಂದರ ಜೀವ ಉಳಿಸಿದೆನು ಎಂಬುದು ಹೆಮ್ಮೆಯ ವಿಷಯವೇ? ಈ ರೀಲ್ ನನ್ನನ್ನು ಆಲೋಚನೆಗೆ ದೂಡಿತು. ಸ್ಥಳೀಯ ಸಸ್ಯ ಸಂಪತ್ತನ್ನೂ ಮೆಟ್ಟಿನಿಂತು ಜಯಶಾಲಿಯಾಗಿವೆಯೆಂದರೆ ಈ ಸಸ್ಯಗಳು ಎಷ್ಟು ಆಕ್ರಮಣಕಾರಿ ಪ್ರವೃತ್ತಿಯವು ಆಗಿರಬಹುದು ಎಂಬ ಆತಂಕವಾಯಿತು.

ನನ್ನ ಆತಂಕವನ್ನು ನಿಜ ಮಾಡುವಂತೆ ಹಿಂದೆಯೇ ಮತ್ತೊಂದು ರೀಲ್ ಕಾಯುತ್ತಿತ್ತು. ಅದರಲ್ಲೊಬ್ಬ ವ್ಯಕ್ತಿ ಕೆಸುವಿನಷ್ಟು ದೊಡ್ಡ ಎಲೆ, ಟೈರ್‌ನಷ್ಟು ದಪ್ಪ ಕಾಂಡವನ್ನು ಬಳಸಿ ಮನೆ ಮುಂದಿನ ತೆಂಗಿನ ಮರವನ್ನು ಹಬ್ಬಿ ಬೆಳೆದಿದ್ದ ಮನೀ ಪ್ಲಾಂಟ್ ಅನ್ನು ಕಿತ್ತು ಸಂಹರಿಸುತ್ತಾ ಕಂಡಲ್ಲಿ ಕೊಲ್ಲುವಂತೆ ವಿನಂತಿಸುತ್ತಿದ್ದ. ಅದನ್ನು ಬುಡ ಸಮೇತ ಕಿತ್ತು ಕೊಚ್ಚಿ ಮುಗಿಸುವಲ್ಲಿ ಅವನಿಗಾದ ತ್ರಾಸು ಅಷ್ಟಿಷ್ಟಲ್ಲ.



ಎಲ್ಲೆಂದರಲ್ಲಿ ಹಬ್ಬಿರುವ ಸಿಂಗೋನಿಯಂ ಗಿಡಗಳು

ನಿಮ್ಮ ಮನೆಯಂಗಳದಲ್ಲಿ ಅಥವಾ ಒಳಾಂಗಣದಲ್ಲಿ ಮಿತಿ ಮೀರಿ ಬೆಳೆದ ಸಸ್ಯಗಳನ್ನು ನೀವೇನು ಮಾಡುತ್ತೀರಿ? ಜಾಗ ಇದೆಯಾದರೆ ಹಾಗೆ ಬೆಳೆಯಲೆಂದು ಬಿಡುತ್ತೀರಿ. ಜಾಗದ ಕೊರತೆಯಿದ್ದರೆ ಕತ್ತರಿಸಿ ಅಕ್ಕಪಕ್ಕದ ಸಸ್ಯಪ್ರೇಮಿಗಳಲ್ಲಿ ಹಂಚುತ್ತೀರಿ. ಹಂಚಿಯೂ ಉಳಿದರೆ ಕಾಂಪೌಂಡ್ ಗೋಡೆಯ ಪಕ್ಕ ಖಾಲಿ ಸೈಟಿನಲ್ಲೋ, ಚರಂಡಿಯಲ್ಲೋ ಎಸೆಯುತ್ತೀರಿ. ಕೆಲವು ಕರಗಿ ಮಣ್ಣು ಸೇರಿದರೆ, ಕೆಲವು ಮಳೆ ಬಂದೋ, ಚರಂಡಿಯ ನೀರಿನ ತೇವವನ್ನು ಎಳೆದೋ ಅಲ್ಲೇ ಬೇರು ಬಿಟ್ಟು ಚಿಗುರೊಡೆಯುತ್ತವೆ. ಹೀಗೆ ನಿಶ್ಕಾಳಜಿಯಲ್ಲಿ ನಿಸರ್ಗ ಸೇರುತ್ತವೆ.

ಲಂಟಾನ, ಮಾರ್ನಿಂಗ್ ಗ್ಲೋರಿ, ವಾಟರ್ ಹಯಾಸಿಂತ್, ವಾಟರ್ ಲೆಟ್ಯುಸ್, ಹೀಗೆ ಹೊರ ದೇಶದಿಂದ ಆಲಂಕಾರಿಕ ಬಳಕೆಗಾಗಿ ಪರಿಚಿತವಾದ ಎಷ್ಟೋ ಗಿಡಗಳು ಇಂದು ವಿನಾಶಕಾರಿ ಹಂತ ತಲುಪಿವೆ. ಹೂಕುಂಡದಲ್ಲಿ ಹಸಿರಿನ ಸೆಲೆಯಾಗಿ ನಿರುಪದ್ರವಿಗಳಾಗಿ ಕಂಡರೂ ಸ್ಥಳೀಯ ಜೀವವೈವಿಧ್ಯಕ್ಕೆ, ಪರಿಸರದ ಸೂಕ್ಷ್ಮವ್ಯವಸ್ಥೆಗೆ ಮಾರಕವಾಗಿ ಪರಿಣಮಿಸಿವೆ. ಎಷ್ಟೋ ವಿದೇಶಿ ಹಣ್ಣು ತರಕಾರಿಗಳು ನಮ್ಮ ಊಟದ ಬಟ್ಟಲು ಸೇರಿವೆಯಾದರೂ ಅವೆಲ್ಲಾ ಯಾತಕ್ಕೂ ಬಾರದ ಕಳೆಯಾಗಿ ಕೀಳಾಗಿ ಬಿಂಬಿಸಿಕೊಂಡಿಲ್ಲ. ಆದರೆ ಕೇವಲ ಆಲಂಕಾರಿಕ ಬಳಕೆಗಾಗಿ ನಮ್ಮ ದೇಶಕ್ಕೆ ಅತಿಥಿಗಳಾಗಿ ಆಗಮಿಸಿದ ಕೆಲವು ಸಸ್ಯಗಳು ಹಿಂದಿರುಗದೇ ಪೀಡಿಸುತ್ತಿರುವುದು ವಿಪರ್ಯಾಸ.

ಹೀಗಾಗದಂತೆ ತಡೆಯುವುದು ಹೇಗೆ?! ನಮ್ಮ ಹೂದೋಟದಲ್ಲಿ ಸ್ಥಳೀಯ ಜೀವವೈವಿಧ್ಯತೆಯನ್ನು (ಪಕ್ಷಿಗಳು, ಜೇನುನೊಣಗಳು, ಚಿಟ್ಟೆಗಳು, ಇತರೆ ಕೀಟಗಳು) ಬೆಂಬಲಿಸುವ ದೇಶಿ ಸಸ್ಯಗಳಿಗೆ ಆದ್ಯತೆ ನೀಡುವುದು; ನಮ್ಮ ಪ್ರದೇಶದಲ್ಲಿ ಯಾವ ಆಲಂಕಾರಿಕ ಪ್ರಭೇದ ಆಕ್ರಮಣಕಾರಿ ಪ್ರವೃತ್ತಿಯನ್ನು ತೋರ್ಪಡಿಸುತ್ತಿದೆ ಎಂದು ತಿಳಿದು ಅಂತಹ ಸಸ್ಯಗಳನ್ನು ದೂರವಿರಿಸುವುದು; ಅವುಗಳನ್ನು ಬೆಳೆಸಿದಲ್ಲಿ ಪ್ರಕೃತಿ ಸೇರದಂತೆ ಗಮನವಹಿಸುವುದು ಮತ್ತು ಇತರರಿಗೂ ಈ ಬಗ್ಗೆ ಜಾಗೃತಿ ಮೂಡಿಸುವುದು; ಹೀಗೆ ಗಾರ್ಡನ್ನಿಗರಾಗಿ ನಮ್ಮ ಪರಿಸರದ ಸಮತೋಲನವನ್ನು ಕಾಪಾಡುವಲ್ಲಿ ಜವಾಬ್ದಾರಿಯನ್ನು ನಿರ್ವಹಿಸೋಣ. ■

